# ಕರ್ನಾಟಕ ವಿಧಾನ ಪರಿಷತ್ತು
## 145 ನೇ ಅಧಿವೇಶನ 2021

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 279
ಮಾನ್ಯ ಸದಸ್ಯರ ಹೆಸರು : ಶ್ರೀ. ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 15-12-2021
ಉತ್ತರಿಸುವ ಸಚಿವರು : ಮಾನ್ಯ ಲೋಕೋಪಯೋಗಿ ಸಚಿವರು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಮಂಜೂರಾದ ಕಿರು ಹಾಗೂ ಬೃಹತ್ ಸೇತುವೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಎಷ್ಟು ಸೇತುವೆಗಳು ಪೂರ್ಣಗೊಂಡಿವೆ; ಬಾಕಿ ಇರುವ ಸೇತುವೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ 2018-19, 2019-20 ಮತ್ತು 2020-21 ರ ಸಾಲಿನಲ್ಲಿ ಒಟ್ಟು 565 ಸೇತುವೆಗಳನ್ನು ಕೈಗೊಳ್ಳಲಾಗಿದ್ದು, ಇವುಗಳಲ್ಲಿ 484 ಕಿರು ಸೇತುವೆಗಳು ಹಾಗೂ 81 ಬೃಹತ್ ಸೇತುವೆಗಳು ಇರುತ್ತವೆ. ಇದರಲ್ಲಿ 227 ಸೇತುವೆಗಳು ಪೂರ್ಣಗೊಂಡಿರುತ್ತವೆ.<br><br>ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | 12 ಕಿ.ಮೀ ದೂರದ ದಾರಿಯನ್ನು ಕೇವಲ 2 ಕಿ.ಮೀ ಗೆ ಕಡಿಮೆಗೊಳಿಸುವ ಕುಂದಾಪುರ-ಗಂಗೊಳ್ಳಿ ಸೇತುವೆ ರಚನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಸೇತುವೆಯ ಅಂದಾಜು ವೆಚ್ಚವೆಷ್ಟು; ಯಾವ ಕಾಲಮಿತಿಯಲ್ಲಿ ಸೇತುವೆ ಪೂರ್ಣಗೊಳಿಸಲಾಗುವುದು; | ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕಿನ ಕುಂದಾಪುರ-ಗಂಗೊಳ್ಳಿ ಸೇತುವೆ ಕಾಮಗಾರಿಯನ್ನು ರೂ.120.00 ಕೋಟಿಗಳ ರೇಖಾ ಅಂದಾಜು ಮೊತ್ತದಲ್ಲಿ ನಿರ್ಮಾಣ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |
| ಇ) | ಕುಂದಾಪುರ ತಾಲ್ಲೂಕಿನ ವಾರಾಹಿ ನದಿಗೆ ಸೌಡ ಎಂಬಲ್ಲಿ ಸೇತುವೆ ರಚನೆಯು ಯಾವ ಹಂತದಲ್ಲಿದೆ; ಮತ್ತು ಯಾವ ಯೋಜನೆಯಡಿ ಮಂಜೂರಾಗಿರುತ್ತದೆ; ಈ ಕಾಮಗಾರಿಯ ಅಂದಾಜು ಮೊತ್ತವೆಷ್ಟು; ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು; (ಆದೇಶದ ಪ್ರತಿಯನ್ನು ಒದಗಿಸುವುದು) | ಕುಂದಾಪುರ ತಾಲ್ಲೂಕಿನ ವಾರಾಹಿ ನದಿಗೆ ಸೌಡ ಎಂಬಲ್ಲಿ ಸೇತುವೆ ರಚನೆಯು ಲೆಕ್ಕಶೀರ್ಷಿಕೆ 5054-NABARD RIDF – XXVII (Bridges) ಯೋಜನೆಯಡಿ ರೂ.1650.00 ಲಕ್ಷಗಳ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |
| ಈ) | ಕುಂದಾಪುರ ತಾಲ್ಲೂಕಿನ ವಾರಾಹಿ ನದಿಗೆ ಕಂಡ್ಲೂರಿನಲ್ಲಿ ನಿರ್ಮಿಸಲಾದ ರಾಜ್ಯ ಹೆದ್ದಾರಿಯಲ್ಲಿನ ಸೇತುವೆಯು ಶಿಥಿಲಾವಸ್ಥೆಯನ್ನು ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದರೆ, ಸೇತುವೆಯ ಪುನರ್ ನಿರ್ಮಾಣದ ಬಗ್ಗೆ ಸರ್ಕಾರದ ಕ್ರಮವೇನು? | PRAMC ವತಿಯಿಂದ ಗುರುತಿಸಲ್ಪಟ್ಟಿರುವ 43 ಬೃಹತ್ ಸೇತುವೆಗಳ ದುರಸ್ತಿ/ಪುನಶ್ಚೇತನ ಕಾಮಗಾರಿಗಳ ಪಟ್ಟಿಯಲ್ಲಿ ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕಿನ, ವಾರಾಹಿ ನದಿಗೆ ಕಂಡ್ಲೂರಿನ ಹತ್ತಿರ ರಾಜ್ಯ ಹೆದ್ದಾರಿ-52 ರ ಸರಪಳಿ 78.50 ಕಿ.ಮೀ ಯಲ್ಲಿ ಸೇತುವೆ ದುರಸ್ತಿ/ಪುನಶ್ಚೇತನ/ನಿರ್ಮಾಣ ಕಾಮಗಾರಿ ಕೈಗೊಳ್ಳಲು ಶಿಫಾರಸ್ಸು ಮಾಡಲಾಗಿದೆ.<br>ಸದರಿ ಸೇತುವೆಯ ದುರಸ್ತಿ/ಪುನಶ್ಚೇತನ/ಪುನರ್ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕೆ.ಆರ್.ಡಿ.ಸಿ.ಎಲ್ ವತಿಯಿಂದ ಎಂಪ್ಯಾನಲ್ ಆಗಿರುವ ಸಮಾಲೋಚಕರಾದ ಮೆ॥ ಬಾದ್ಯ ಎಂಜಿನಿಯರಂಗ್ ಸರ್ವೀಸಸ್ ಪ್ರೈ. ಲಿಮಿಟೆಡ್ ರವರಿಗೆ ಸೇತುವೆ ಅನುಷ್ಠಾನಕ್ಕೆ ಅಗತ್ಯವಾಗಿರುವ ವಿಸ್ತೃತಾ ಯೋಜನಾ ವರದಿ ತಯಾರಿಸಲು ದಿನಾಂಕ: 28-04-2021 ರಲ್ಲಿ ವಹಿಸಲಾಗಿರುತ್ತದೆ. |

ಸಂಖ್ಯೆ. ಲೋಇ E-355 ಇಎಪಿ 2021

(ಸಿ.ಸಿ. ಪಾಟೀಲ್)
ಲೋಕೋಪಯೋಗಿ ಸಚಿವರು

# ಅನುಬಂಧ

| ಕ್ರ ಸಂ. | ಜಿಲ್ಲೆಗಳ ಹೆಸರು | 2018-19 | | | 2019-20 | | | 2020-21 | | |
|---|---|---|---|---|---|---|---|---|---|---|
| | | ಬೃಹತ್ ಸೇತುವೆಗಳ ಸಂಖ್ಯೆ | ಕಿರು ಸೇತುವೆಗಳ ಸಂಖ್ಯೆ | ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ | ಬೃಹತ್ ಸೇತುವೆಗಳ ಸಂಖ್ಯೆ | ಕಿರು ಸೇತುವೆಗಳ ಸಂಖ್ಯೆ | ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ | ಬೃಹತ್ ಸೇತುವೆಗಳ ಸಂಖ್ಯೆ | ಕಿರು ಸೇತುವೆಗಳ ಸಂಖ್ಯೆ | ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ |
| 1 | ಮಂಡ್ಯ | 2 | 15 | 0 | | | | | | |
| 2 | ಮೈಸೂರು | 0 | 13 | 5 | | | | | | |
| 3 | ಹಾಸನ | 3 | 8 | 0 | 0 | 1 | 1 | | | |
| 4 | ಕೊಡಗು | 0 | 6 | 0 | | | | 0 | 1 | 1 |
| 5 | ಬೆಂಗಳೂರು ನಗರ | 1 | 4 | 3 | | | | | | |
| 6 | ಬೆಂಗಳೂರು | 0 | 0 | 0 | | | | | | |
| 7 | ಚಿಕ್ಕಬಳ್ಳಾಪುರ | 0 | 5 | 4 | | | | | | |
| 8 | ಕೋಲಾರ | 0 | 1 | 0 | | | | | | |
| 9 | ತುಮಕೂರು | 0 | 16 | 10 | | | | | | |
| 10 | ಚಿತ್ರದುರ್ಗ | 1 | 19 | 0 | 5 | 3 | 0 | 5 | 4 | 3 |
| 11 | ದಕ್ಷಿಣ ಕನ್ನಡ | 1 | 10 | 1 | 0 | 7 | 3 | 5 | 2 | 0 |
| 12 | ಚಿಕ್ಕಮಗಳೂರು | 6 | 4 | 3 | 3 | 0 | 3 | 6 | 0 | 6 |
| 13 | ಶಿವಮೊಗ್ಗ | 5 | 10 | 6 | 0 | 3 | 0 | 0 | 0 | 0 |
| 14 | ಉಡುಪಿ | 1 | 24 | 22 | 0 | 16 | 16 | 0 | 16 | 16 |
| 15 | ಧಾರವಾಡ | 4 | 12 | 3 | 0 | 0 | 0 | 0 | 0 | 0 |
| 16 | ಉತ್ತರಕನ್ನಡ | 7 | 26 | 2 | 0 | 2 | 1 | 0 | 1 | 1 |
| 17 | ಬೆಳಗಾವಿ | 9 | 18 | 6 | 1 | 9 | 10 | 0 | 6 | 3 |
| 18 | ರಾಯಚೂರು | 1 | 8 | 0 | 2 | 3 | 0 | 1 | 3 | 0 |
| 19 | ವಿಜಯಪುರ | 1 | 9 | 0 | 0 | 0 | 0 | 0 | 0 | 0 |
| 20 | ಬಳ್ಳಾರಿ | 1 | 16 | 14 | 1 | 24 | 19 | 0 | 2 | 2 |
| 21 | ಕೊಪ್ಪಳ | 0 | 7 | 4 | 0 | 1 | 1 | 0 | 0 | 0 |
| 22 | ಕಲಬುರ್ಗಿ | 4 | 15 | 9 | 0 | 7 | 6 | 0 | 0 | 0 |
| 23 | ಗದಗ | 0 | 15 | 3 | 0 | 2 | 2 | 0 | 2 | 2 |
| 24 | ಬಾಗಲಕೋಟೆ | 2 | 8 | 6 | 0 | 6 | 6 | 0 | 7 | 7 |
| 25 | ದಾವಣಗೆರೆ | 0 | 5 | 0 | 0 | 2 | 2 | 0 | 1 | 1 |
| 26 | ಬೀದರ್ | 0 | 15 | 5 | 1 | 1 | 1 | 0 | 0 | 0 |
| 27 | ಹಾವೇರಿ | 2 | 19 | 0 | 0 | 0 | 0 | 0 | 0 | 0 |
| 28 | ಯಾದಗಿರಿ | 0 | 1 | 0 | 0 | 0 | 0 | 0 | 1 | 0 |
| 29 | ಚಾಮರಾಜನಗರ | 0 | 24 | 1 | | | | | | |
| 30 | ರಾಮನಗರ | 0 | 16 | 6 | 0 | 1 | 1 | | | |
| 31 | ವಿಜಯನಗರ | 0 | 1 | 0 | | | | | | |
| | **ಒಟ್ಟು** | **51** | **350** | **113** | **13** | **88** | **72** | **17** | **46** | **42** |